ಗಂಡಂದಿರಾಗೋಕೆ ಸಾಧ್ಯ ಇಲ್ಲ... ಆದರೆ ಗಂಡನಾಗೋನು ಫ್ರೆಂಡಾಗೋಕೂ ಸಿದ್ಧವಾಗಿರಬೇಕು... ಇದು ಅವನಿಗೆ ಸುಮ್ಮನೆ ಒಂದು ಚಿಕ್ಕ ಪರೀಕ್ಷೆ ಗೊತ್ತಾ?'

ಮಗಳು ಈ ಪರಿ ಮುಂದುವರೆದಿದ್ದಾಳೆಂಬ ಆಶ್ಚರ್ಯದೊಡನೆ ಸರಿ ದಾರಿಯಲ್ಲಿದ್ದಾಳೆಂದು ಒತ್ತರಿಸಿ ಅನ್ನಿಸಿಬಂತು. 'ಒಪ್ಪಿದೆ, ಚಿನ್ನು... ಅಯಾಮ್ ಆಲ್ ಫೈನ್ ವಿತ್ ಇಟ್ಸ್... ಆದರೆ ಇಬ್ಬರೂ ಒಂದೇ ರೂಮಿನಲ್ಲಿ ಮಾತ್ರ ಇರಬೇಡಿ ಆಯಿತಾ? ನಾನು ಓಲ್ಡ್ ಫ್ಯಾಷನ್ನೇ ಇರಬಹುದು... ಆದರೆ ನಿನ್ನ ಅಮ್ಮ ಕಣೇ, ನಾನು...' ಹೀಗೆ ಹೇಳುವಾಗ, ಕೊರಳುಕ್ಕಿಬಂದು ಗದ್ಗದಿಸಿದೆ.

'ಅಮ್ಮಾ... ನಾಟ್ಟು ವರಿ ಎಟಾಲ್... ನಾನು ನಿನ್ನ ಮಗಳು. ಅಂಥದ್ದೇನೂ ಆಗಲ್ಲ...' ಚಿನ್ನು ನಗುತ್ತ ಹೇಳಿದಳು. 'ಮುಂದೇನು ಅಂತ ಮುಂದಿನ ವಾರ ಗೊತ್ತಾಗುತ್ತೆ... ಶುಕ್ರವಾರ ಹೋಗುತಿದ್ದೀನಿ. ಸೋಮವಾರ ಬಂದುಬಿಡುತೀನಿ... ಆಯಿತಾ?'

ಮುಂದಿನ ಶುಕ್ರವಾರದವರೆಗೂ, ಚಿನ್ನು ಹೊರಡುವ ಮೊದಲು –ಒಂದಷ್ಟು ಡೂಸ್–ಡೋಂಟ್ಸ್ ಹೇಳಬೇಕೆಂದು ತಯಾರಿ ಮಾಡಿಕೊಂಡಿದ್ದೆಲ್ಲವೂ –ಅವಳನ್ನು ಬೀಳ್ಕೊಡಲಿಕ್ಕೆ ಏರ್ಪೋರ್ಟಿಗೆ ಹೋದ ಮೇಲೂ, ಹೊರಬರದೆಯೆ ಮಿಕ್ಕವು. ಅವಳು 'ಚೆಕ್ಕಿನ್'ಗೆ ತೆರಳುವವರೆಗೂ ನೀಲಿಯೇ ಮಾತನಾಡಿದ್ದು. ಹಿತನುಡಿಯೆನಿಸದಷ್ಟು ನಾಜೂಕಿನ ಮಾತು ಹೇಳಿದ್ದು. ಕಡೆಯಲ್ಲಿ ಬೀಳ್ಕೊಳ್ಳುವ ತುಸು ಮೊದಲು, ಚಿನ್ನು ನನ್ನನ್ನಪ್ಪಿಕೊಂಡು– 'ಅಮ್ಮಾ... ಹೆದರಿಕೋಬೇಡ. ನನ್ನ ಉದ್ದೇಶ ನೆರವೇರಲಿ ಅಂತ ಹಾರೈಸು ಅಷ್ಟೆ...' ಅಂತಂದಳು. 'ಒಳ್ಳೇದು... ಒಳ್ಳೇದು...' ಎಂದು ಹರಸಿದ್ದಾಯಿತು,

ಬಳಿಕ, ಚಿನ್ನು ವಾಪಸಾಗುವುದನ್ನೇ ಕಾಯುವುದಾಯಿತು. ಶೇಷಪ್ ಜೊತೆಯ ಮುಲಾಕಾತು ಫಲಿಸಲೆಂದು ಆಶಿಸಿದ್ದಾಯಿತು. ಕ್ಷೇಮದೊಡನೆ ಲಾಭವೂ ಚೆನ್ನಿರಲೆಂದು ಹಾರೈಸಿದ್ದಾಯಿತು.

ಸೋಮವಾರ ಇಳಿರಾತ್ರಿಯಲ್ಲಿ ಮಗಳನ್ನು ವಾಪಸಿಳಿಸಿಕೊಳ್ಳಲು ಏರ್ಪೋರ್ಟಿನತ್ತ ಹೊರಟೆವಷ್ಟೆ, ನನ್ನ ಮೊಬೈಲು ರಿಂಗಾಯಿತು. ಗುರುಚರಿತನ ಫೋನು. 'ಏನು ಕನಕಮ್ಮ... ಒಳ್ಳೇ ಪಾಠ ಕಲಿಸಿಕೊಟ್ಟೆ...' ಚೇಳು ಕುಟುಕಿದಂತಹ ಮಾತು. ಏನು ಹೇಳುತ್ತಿದ್ದಾನೆಂಬುದು ಗೊತ್ತಾಗಲಿಲ್ಲ. ಹಾಯ್ ಹೆಲೋ... ಇತ್ಯಾದಿ ಉಪಚಾರವಿಲ್ಲದೆಯೆ, ಸೀದಾ ವಿಷಯಕ್ಕಿಳಿದು ಝಾಡಿಸಿದ. 'ಮಗಳ ಮೂಲಕ ಚೆನ್ನಾಗಿ ಸೇಡು ತೀರಿಸಿಕೊಂಡೆ, ತಾಯಿ... ನಿನಗೊಂದು ದೊಡ್ಡ ನಮಸ್ಕಾರ... ಕೋಟಿ ನಮಸ್ಕಾರ...' ಚೇಳಿನ ಕೊಂಡಿ ಕುಟುಕಿದಲ್ಲೇ ಮಿಕ್ಕು, ಮತ್ತೆ ಮತ್ತೆ ಇರಿದಂತಾಯಿತು.

'ಯ್ಯ್... ಯ್ಯಾಕೆ ಗುರೂ? ಏನಾಯಿತು?' ದಿಗಿಲಿನ ನಡುವೆ ಕೇಳಿದೆ.

'ಇನ್ನೇನಮ್ಮ ಆಗುತ್ತೆ? ನಿನ್ನ ಮಗಳು ಮದುವೆ ಬೇಡ ಅಂತಂದಳಂತೆ...'

ಹುಹ್ಹ್... ಅನ್ನುತ್ತ ಉಸಿರು ದಬ್ಬಿದೆ. ಒಂದರ್ಥದಲ್ಲಿ ನಿರಾಳವನ್ನಿಸಿತು. ಮನಸಿನಿಂದ ಕಿತ್ತೆಸೆದಿದ್ದ ಆಸೆಯು ಹೀಗೆ ಫಲಿಸೀತೆಂದು ಊಹಿಸಿದ್ದೆನೆಲ್ಲಿ? ಒನ್ನಮೂನೆ ಸಂಭ್ರಮವೇ ಆಯಿತು.

'ಇನ್ನು ಮುಂದೆ ಗೆಳೆಯರಂತೆ ಇದ್ದುಬಿಡೋಣ ಅಂತಂದಳಂತೆ... ಎಷ್ಟು ಅಹಂಕಾರ ಅಲ್ಲವೇನೇ, ಅವಳಿಗೆ?'

'....??!!'

ಮನಸಿನಲ್ಲುಂಟಾದ ನೆಮ್ಮದಿಗೆ ಪಾರವಿರಲಿಲ್ಲ.

'ಏನು ಕಾರಣ ಕೊಟ್ಟಳಂತೆ, ಗೊತ್ತಾ? ನೀನು ಡುಮ್ಮ... ನೀನು ಠೊಣಪ... ಬಾಡಿ–ಹೈಜೀನು